# ಮಲ್ಲಕಂಬ

**ಅ. ಕೆಳಗಿನ ಪದಗಳ ಅರ್ಥ ಬರೆಯಿರಿ. (Write the word meaning)**

ಆಸ್ಥಾನ, ಜಟ್ಟಿ, ಪಟ್ಟು, ಪ್ರಾರ್ಥಿಸು, ದೇಖೋ, ಹಂಗಾ, ಅಬ್ಬಬ್ಬ, ಔಡಲೆಣ್ಣೆ, ಭೈಯ್ಯಾ, ಹೆಡ್ಮಾಸ್ತರ

**ಆ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. (Answer in one sentence)**

೧.ರಾಜ್ಯೋತ್ಸವದ ಮೆರವಣಿಗೆಯಲ್ಲಿ ಇಬ್ರಾಹಿಂ ಕಂಡ ಕಸರತ್ತು ಯಾವುದು?

೨. ಪುರಾಣಕಾಲದಲ್ಲಿ ಮಲ್ಲಕಂಬವನ್ನು ಯಾರು ಅಭ್ಯಾಸ ಮಾಡಿದ್ದರು?

೩.ಮಲ್ಲಕಂಬವನ್ನು ಕುಸ್ತಿ ಆಡುವವರು ಏಕೆ ಅಭ್ಯಾಸ ಮಾಡುತ್ತಾರೆ?

೪. ಮಲ್ಲಕಂಬದ ಮೇಲೆ ಹತ್ತಿದವರು ಏಕೆ ಜಾರುತ್ತಿದ್ದರು?

೫.ಹೈದರಾಬಾದ್ ನಿಜಾಮನ ಆಸ್ಥಾನದಲ್ಲಿದ್ದ ಕುಸ್ತಿಪಟುಗಳು ಯಾರು ಯಾರು?

೬. ಬಾಳಂಭಟ್ಟನು ಕುಸ್ತಿಪಟ್ಟುಗಳನ್ನು ಕಲಿಯಲು ಎಲ್ಲಿಗೆ ಹೋದನು?

೭. ಅಲಿ ಮತ್ತು ಗುಲ್ ಕುಸ್ತಿಪಟುಗಳು ಹಾಕಿದ ಸವಾಲನ್ನು ಯಾರು ಒಪ್ಪಿಕೊಂಡರು?

**ಇ. ಈ ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ. (Answer in three – four sentences)**

೧. ಬಾಳಂಭಟ್ಟನು ಕುಸ್ತಿಪಟ್ಟುಗಳನ್ನು ಹೇಗೆ ಕಲಿತನು?

೨. ಅಲಿ ಮತ್ತು ಗುಲ್ ಕುಸ್ತಿಪಟುಗಳು ಪೇಶ್ವೆಗೆ ಏನೆಂದು ಸವಾಲು ಹಾಕಿದರು?

೩. ಇಬ್ರಾಹಿಂ ಮಲ್ಲಕಂಬದ ಕಸರತ್ತನ್ನು ನೋಡಿ ಯಾವ ರೀತಿ ಆಶ್ಚರ್ಯ ವ್ಯಕ್ತಪಡಿಸಿದನು?

**ಈ. ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು? (Who said to whom)**

೧. 'ಕಂಬದ ತುದಿ ಮುಟ್ಟುತ್ತಾನಂದ್ರ ಪಸಕ್ಕನೆ ಜಾರಿಬಿಟ್ಟರ'

೨. 'ನಿಮ್ಮ ರಾಜ್ಯದ ಮಲ್ಲರು ನಮ್ಮನ್ನು ಕುಸ್ತಿಯಲ್ಲಿ ಸೋಲಿಸಬೇಕು'

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

೩. 'ಔಡಲೆಣ್ಣೆ ತೆಳ್ಳಗೆ ಸವರಾರ ಕೈಯಿಟ್ಟರ ಜಾರತ್ತೈತಿ.'

## ಉ. ಬಿಟ್ಟ ಸ್ಥಳ ತುಂಬಿರಿ. (Fill in the blanks)

೧. ಮಲ್ಲಕಂಬಕ್ಕೆ ……………………. ಎಣ್ಣೆ ಸವರಿರುತ್ತಾರೆ.
೨. ಬಾಳಂಭಟ್ಟನು ಕುಸ್ತಿಪಟ್ಟುಗಳನ್ನು ………………. ನೋಡಿ ಕಲಿತುಕೊಂಡನು.
೩.ಬಾಳಾಜಿ ಪೇಶ್ವೆಯ ಸ್ಥಳ …………………
೪. ಮಲ್ಲಕಂಬವನ್ನು ……………………..ಪಟ್ಟುಗಳನ್ನು ಕಲಿಯಲು ಅಭ್ಯಾಸ ಮಾಡುತ್ತಾರೆ.

## ಊ. ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ. (Make your own sentences)

ಮೆರವಣಿಗೆ, ಕಸರತ್ತು, ಸವಾಲು, ಆಸ್ಥಾನ, ಫಲನೀಡು, ಪ್ರಶಸ್ತಿಪತ್ರ

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

## ಋ: ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ. (Split the word)

ರಾಜ್ಯೋತ್ಸವ: ……………………
ಮಲ್ಲಗಂಬ: ……………………..
ಜಟ್ಟಿಯಾಳು: ……………………
ಅಲ್ಲೋಡು: ............................................